ಗ್ರಾಮಗಳಿಗೆ ರಸ್ತೆ ಸೌಲಭ್ಯ ಒದಗಿಸಿಕೊಡಬೇಕು. ತಾರತಮ್ಯ ಮಾಡುವುದು ಬೇಡ. ಇಲ್ಲಿ ಇರತಕ್ಕಂತಹ ಗ್ರಾಮಗಳಿಗೆ ಹೆಚ್ಚು ಹಣ ಒದಗಿಸಬೇಕಾಗಿದೆ. ಬಹಳಷ್ಟು ಗ್ರಾಮಗಳು ಹತಾಶವಾಗಿವೆ. ಹೆಚ್ಚು ಹೆಚ್ಚು ಒತ್ತು ಕೊಟ್ಟು ಆ ಯೋಜನೆಗಳು ಮತ್ತೆ ಪುನರಾರಂಭ ಮಾಡಬೇಕು. ಮೊದಲಿನಂತೆ 25 ಲಕ್ಷ ರೂಪಾಯಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಸುಮಾ ವಸಂತ್: ಮಾನ್ಯ ಅಧ್ಯಕ್ಷರೆ, ಆಯಾ ಇಲಾಖೆಯ ವತಿಯಿಂದ ಅಭಿವೃದ್ಧಿಗಾಗಿ ಹಣ ಒದಗಿಸಲಾಗುತ್ತದೆ. ಜಿಲ್ಲಾಪರಿಷತ್ತಿನಿಂದ ಜಿಲ್ಲಾ ಪಂಚಾಯಿತಿ ರಸ್ತೆಗೆ ಹಣ ಬಿಡುಗಡೆ ಮಾಡಲಾಗುತ್ತದೆ, ಲೋಕೋಪಯೋಗಿ ಇಲಾಖೆ ವತಿಯಿಂದ ಲೋಕೋಪಯೋಗಿ ರಸ್ತೆಗೆ ಕೊಡುತ್ತಿದ್ದೇವೆ. ಗಡಿ ಪ್ರದೇಶ ಅಭಿವೃದ್ಧಿಗೆ ಏನು ಹಣ ನಿಗಧಿ ಮಾಡಲಾಗಿದೆ ಅಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬಂದಾಗ ಪ್ರಸ್ತಾಪ ಮಾಡಿದರೆ ಸೂಕ್ತವಾದ ಉತ್ತರ ದೊರೆಯುತ್ತದೆ.

(ಪ್ರಶ್ನೆಯನ್ನು ತಡೆ ಹಿಡಿಯಲಾಯಿತು)

ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಗುರುತಿಸುವುದು.

72(538)

ಶ್ರೀ ಎ.ಎನ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿನ ವಿದ್ಯಾರ್ಥಿಗಳಲ್ಲಿ ಗ್ರಾಮೀಣ ಕ್ರೀಡೆ ಪ್ರೋತ್ಸಾಹಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು?

ಆ) ಈ ಕುರಿತಾಗಿ ಯೋಜನೆ ಹಾಕಿಕೊಳ್ಳಲಾಗಿದೆಯೇ? ಎಷ್ಟು ಹಣ ಬಿಡುಗಡೆಯಾಗಿದೆ? ಆಗಿರುವ ವೆಚ್ಚ?

ಇ) ಮೈಸೂರು ತಾಲ್ಲೂಕಿನಲ್ಲಿ ಎಷ್ಟು ಕ್ರೀಡಾಳುಗಳನ್ನು ಗ್ರಾಮೀಣ ಪ್ರದೇಶದಿಂದ ಗುರುತಿಸಲಾಗಿದೆ. ಇವರಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿರುವವರು ಯಾರು?

ಈ) ಇವರ ಪ್ರತಿಭೆ ಪ್ರೋತ್ಸಾಹಿಸಲು ಸರ್ಕಾರವು ಹಾಕಿಕೊಂಡಿರುವ ಯೋಜನೆಗಳೇನು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಗ್ರಾಮಾಂತರ ಪ್ರದೇಶದಲ್ಲಿನ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಗ್ರಾಮೀಣ ಕ್ರೀಡಾಕೂಟ ಮಹಿಳಾ ಕ್ರೀಡಾ ಕೂಟ, ದಸರಾ ಕ್ರೀಡಾಕೂಟ ಸ್ಪರ್ಧೆಗಳನ್ನು ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ನಡೆಸಿ ರಾಜ್ಯ ಮಟ್ಟದಿಂದ ಆಯ್ಕೆ ಮಾಡಿ ರಾಷ್ಟ್ರಮಟ್ಟಕ್ಕೆ ತಂಡವನ್ನು ಕಳುಹಿಸಲಾಗುತ್ತಿದೆ. ಇವರುಗಳಿಗೆ ತಾಲ್ಲೂಕು ಮಟ್ಟದಿಂದ ರಾಷ್ಟ್ರ ಮಟ್ಟದವರೆಗೆ ಭಾಗವಹಿಸಲು ಪ್ರಯಾಣ ಹಾಗೂ ದಿನಭತ್ಯೆಯನ್ನು ನೀಡಲಾಗುತ್ತಿದೆ. ಹಾಗೂ ಪ್ರತಿ ವರ್ಷ ಮೇ ಮಾಹೆಯಲ್ಲಿ ವಾರ್ಷಿಕ ಪರೀಕ್ಷೆಗಳ ನಂತರ ಬೇಸಿಗೆ ತರಬೇತಿ ಶಿಬಿರವನ್ನು ನಡೆಸಲಾಗುತ್ತಿದೆ. ಹಾಗೆ ಪ್ರತಿಭಾವಂತ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ರಾಜ್ಯಮಟ್ಟದ ಆಯ್ಕೆ ಮೂಲಕ ಕ್ರೀಡಾ ಶಾಲೆ ವಸತಿ ನಿಲಯಗಳಿಗೆ ಸೇರ್ಪಡೆ ಮಾಡಲಾಗುತ್ತಿದೆ. ಹಾಗೂ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಕರ್ನಾಟಕ ಸರ್ಕಾರ ಪ್ರೌಢಶಾಲಾ ವಿದ್ಯಾರ್ಥಿಗಳಾಗಿದ್ದಲ್ಲಿ ತಲಾ 600-00 ವಿದ್ಯಾರ್ಥಿ ವೇತನ ಭಾರತ ಕ್ರೀಡಾ ಪ್ರಾಧಿಕಾರ ರಾಜ್ಯಮಟ್ಟದ ವಿಜೇತರಿಗೆ ವಾರ್ಷಿಕ 5200-00 ಮತ್ತು ರಾಷ್ಟ್ರಮಟ್ಟದ ವಿಜೇತರಿಗೆ ವಾರ್ಷಿಕ 7200-00 ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

ಆ) ತಾಲ್ಲೂಕು ಮಟ್ಟದ ಕ್ರೀಡಾ ಕೂಟಗಳನ್ನು ನಡೆಸಿ ನಂತರ ಜಿಲ್ಲಾ ಮಟ್ಟದ ಸ್ಪರ್ಧೆ ನಡೆಸಿ ರಾಜ್ಯಮಟ್ಟಕ್ಕೆ ತಂಡಗಳನ್ನು ಕಳುಹಿಸಲು ವ್ಯವಸ್ಥೆ ಮಾಡಲಾಗಿದ್ದು, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಕ್ಕೆ ಒಟ್ಟು ಮೈಸೂರು ಜಿಲ್ಲೆಗೆ ಒಟ್ಟು ರೂ.66,000-00ಗಳು ವೆಚ್ಚ ಮಾಡಲಾಗಿದೆ. ಪ್ರತಿ ತಾಲ್ಲೂಕಿಗೆ 4,000-00ರಂತೆ ಜಿಲ್ಲಾ ಮಟ್ಟಕ್ಕೆ ರೂ.38,000-00 ಗಳು.

ಇ) ಮೈಸೂರು ಜಿಲ್ಲೆಯಿಂದ ರಾಜ್ಯಮಟ್ಟದ ಗ್ರಾಮೀಣ ಕ್ರೀಡಾಕೂಟದಲ್ಲಿ 93 ಮಂದಿ ಭಾಗವಹಿಸಿದ್ದು ಇದರಲ್ಲಿ ಮೈಸೂರು ತಾಲ್ಲೂಕಿನವರು 23 ಮಂದಿ ಕ್ರೀಡಾಪಟುಗಳು ಭಾಗವಹಿಸಿರುತ್ತಾರೆ. ಇವರಲ್ಲಿ ಮೈಸೂರು ಜಿಲ್ಲೆಯಿಂದ 7 ಮಂದಿ ರಾಷ್ಟ್ರೀಯ ಗ್ರಾಮೀಣ ಕ್ರೀಡೆಯಲ್ಲಿ ರಾಜ್ಯ ಪ್ರತಿನಿಧಿಸಿದ್ದು, ಮೈಸೂರು ತಾಲ್ಲೂಕು ಕ್ರೀಡಾಪಟುಗಳು ಯಾರು ಇರುವುದಿಲ್ಲ.

ಈ) ಬೇಸಿಗೆ ತರಬೇತಿ ಶಿಬಿರವನ್ನು ಪ್ರತಿ ಮೇ ಮಾಹೆಯಲ್ಲಿ ನಡೆಸಲಾಗುವುದು ಮತ್ತು ಉದಯೋನ್ಮುಖ ಕ್ರೀಡಾಪಟುಗಳಿಗೆ ಇದರಲ್ಲಿ ಭಾಗವಹಿಸಲು ಅವಕಾಶ

ಕಲ್ಪಿಸಿಕೊಡಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿನ ಕ್ರೀಡಾ ಪ್ರತಿಭೆಯನ್ನು ಗುರುತಿಸಲು ಕ್ರೀಡಾ ಪ್ರತಿಭಾ ಸ್ಪರ್ಧೆಯನ್ನು ನಡೆಸಲಾಗುವುದು

12.00 ಪಿ.ಎಂ.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯ ಮೂಲ ಉದ್ದೇಶ ಇಂದು ಗ್ರಾಮೀಣ ಪ್ರದೇಶದ ಜನರು ಕೂಡ ಮೈಸೂರು ನಗರದ ಕ್ರೀಡಾಪಟುಗಳು ಟ್ರ್ಯಾಕ್ ಸೂಟ್ ಹಾಕಿಕೊಂಡು ರಾಷ್ಟ್ರಮಟ್ಟದಲ್ಲಿ ಹೆಸರುಗಳಿಸುವಂತೆ ಆಗಬೇಕೆನ್ನುವುದೇ ಆದುದರಿಂದ ಆ ಹಿನ್ನೆಲೆಯಲ್ಲಿ ನಾನು ಪ್ರಶ್ನೆಗಳನ್ನು ಕೇಳಿದ್ದೇನೆ. ಇದರ ಜೊತೆಗೆ ರಾಷ್ಟ್ರಮಟ್ಟದಲ್ಲಿ ನಡೆಯುವ ಕ್ರೀಡೆಗೆ ಮೈಸೂರು ತಾಲ್ಲೂಕಿನಿಂದ ಆಯ್ಕೆಯಾದ ಕ್ರೀಡಾಪಟುಗಳ್ಯಾರು ಎಂಬುದರ ಬಗ್ಗೆ ಉತ್ತರದಲ್ಲಿ ತಿಳಿಸಿಲ್ಲ. ಇನ್ನು ಹಣವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಆ ಹಣ ಪೂರ್ತಿಯಾಗಿ ತಲುಪುತ್ತಿಲ್ಲವೆನ್ನುವ ಮಾತುಗಳು ಬಂದಿವೆ. ಸ್ಪೋರ್ಟ್ಸ್ ಅಥಾರಟಿ ಆಫ್ ಇಂಡಿಯಾದಿಂದ ಮೈಸೂರು ಜಿಲ್ಲೆಗೆ ಅದರಲ್ಲೂ ಮೈಸೂರು ತಾಲ್ಲೂಕಿಗೆ ಎಷ್ಟು ಹಣ ಬಂದಿದೆ ಮತ್ತು ಮೈಸೂರು ತಾಲ್ಲೂಕಿನಿಂದ ಎಷ್ಟು ಕ್ರೀಡಾ ಪಟುಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಗಿದೆ ಎಂಬ ಬಗ್ಗೆ ವಿವರವನ್ನು ಸಚಿವರು ಕೊಡಬೇಕು. ಇದರ ಜೊತೆಗೆ ಸ್ಪೋರ್ಟ್ಸ್ ಸ್ಕೂಲ್ ಏನಿದೆ ಅಲ್ಲಿ ಗ್ರಾಮಾಂತರ ಪ್ರದೇಶದ ಮಕ್ಕಳು ಎಷ್ಟು ಇದ್ದಾರೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಸ್ವಾಮಿಯವರು ಮೈಸೂರು ತಾಲ್ಲೂಕಿನಿಂದ ಎಷ್ಟು ಕ್ರೀಡಾಪಟುಗಳು ಕ್ರೀಡೆಯಲ್ಲಿ ಭಾಗವಹಿಸಿದ್ದಾರೆನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಒಟ್ಟು 31 ಜನ ಕ್ರೀಡಾಪಟುಗಳು ಕ್ರೀಡೆಯಲ್ಲಿ ಭಾಗವಹಿಸಿ ಯಾರೂ ಗೆದ್ದಿಲ್ಲ. ಅವರುಗಳೇನಾದರೂ ರಾಜ್ಯಮಟ್ಟದಲ್ಲಿ ಗೆಲುವು ಪಡೆದಿದ್ದರೆ ಅವರನ್ನು ರಾಷ್ಟ್ರ ಮಟ್ಟಕ್ಕೆ ಕಳುಹಿಸಬಹುದಾಗಿತ್ತು. ಆದರೆ ಗ್ರಾಮಾಂತರ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ 21 ಜನರು ಐದು ಕ್ರೀಡೆಗಳಲ್ಲಿ ಗೆದ್ದಿದ್ದಾರೆ, ಆದರೆ ಅವರುಗಳು ರಾಜ್ಯಮಟ್ಟದಲ್ಲಿ ಗೆಲುವನ್ನು ಸಾಧಿಸಲಿಲ್ಲ. ಇನ್ನು ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದವರು ಎಷ್ಟು ಹಣವನ್ನು ಕ್ರೀಡಾಪಟುಗಳಿಗೋಸ್ಕರ ಕೊಡುತ್ತಿದ್ದಾರೆನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಆಯ್ಕೆಯಾದ ಕ್ರೀಡಾಪಟುಗಳಿಗೆ ಹೆಚ್ಚಿನ ತರಬೇತಿಯನ್ನು ಕೊಡುವ ಏರ್ಪಾಡನ್ನು ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದವರು ಮಾಡುತ್ತಾರೆ. ನಮ್ಮಲ್ಲಿ ಮೊದಲು ಗೆದ್ದು ಮೆಡಲ್ ಗೆದ್ದವರನ್ನು ಹೆಚ್ಚಿನ ತರಬೇತಿಗಾಗಿ ಅಲ್ಲಿಗೆ ಕಳುಹಿಸಿಕೊಡುತ್ತೇವೆ. ಇನ್ನು ಸದಸ್ಯರು ಮೈಸೂರು ಜಿಲ್ಲೆಯಲ್ಲಿ ಯಾವಾಗ ಕ್ರೀಡಾ ತರಬೇತಿಯನ್ನು ನಡೆಸುತ್ತೀರಿ ಎಂದು ಕೇಳಿದ್ದಾರೆ. ನಾವು ಪರೀಕ್ಷೆಗಳು ನಡೆದ ಮೇಲೆ

ಬೇಸಿಗೆಯಲ್ಲಿ ಮೇ ತಿಂಗಳಿನಲ್ಲಿ ಕ್ರೀಡಾ ತರಬೇತಿ ನಡೆಸುತ್ತಿದ್ದೇವೆ. ಅದೇ ರೀತಿಯಲ್ಲಿ ಈ ಬಾರಿಯೂ ಕೂಡ ಮೇ ತಿಂಗಳಿನಲ್ಲಿ ತರಬೇತಿಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಇಂದು ಕ್ರೀಡೆಗಾಗಿ ಬಿಡುಗಡೆಯಾಗುವ ಹಣದಲ್ಲಿ ಹೆಚ್ಚು ಪಾಲು ಮೆಟ್ರೊಪಾಲಿಟನ್ ಸಿಟಿಗಳಲ್ಲಿ ಕ್ರೀಡೆಗಾಗಿ ಖರ್ಚಾಗುತ್ತಿದೆಯೇ ಹೊರತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಖರ್ಚಾಗುತ್ತಿಲ್ಲ ವಿಶೇಷವಾಗಿ ಮೈಸೂರು ತಾಲ್ಲೂಕಿನ ಪ್ರದೇಶಗಳಲ್ಲಿ ಕುಸ್ತಿ ಪಟುಗಳು ಹೆಚ್ಚಾಗಿದ್ದಾರೆ. ಇದುವರೆಗೂ ನಾಲ್ಕು ಬಾರಿ ಗರಡಿ ಅಭಿವೃದ್ಧಿಗೋಸ್ಕರ ಮತ್ತು ಪೈಲ್ವಾನ್‌ರವರುಗಳ ಅಭಿವೃದ್ಧಿಗೋಸ್ಕರ ಪ್ರೋತ್ಸಾಹ ಕರ ಯೋಜನೆಗಳ ಬಗ್ಗೆ ಸರ್ಕಾರಕ್ಕೆ ಹೇಳಿದ್ದರೂ ಕೂಡ ಯಾವುದೇ ಯೋಜನೆಗಳನ್ನು ಸರ್ಕಾರ ಹಾಕಲಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಹಾಲಿ ಕುಸ್ತಿ ಪಟುಗಳಿಗೆ ಸರ್ಕಾರದ ವತಿಯಿಂದ 600-00 ರೂಪಾಯಿಗಳ ಮಾಸಾಶನವನ್ನೇನು ಕೊಡಲಾಗುತ್ತಿದೆ ಅದನ್ನು ಹೆಚ್ಚು ಮಾಡುವುದಕ್ಕೆ ಪ್ರಸ್ತಾಪ ಬಂದಿದೆ. ಮಾಸಾಶನವನ್ನು ಆದಷ್ಟು ಬೇಗ ಹೆಚ್ಚು ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಮೈಸೂರು ಜಿಲ್ಲೆಯಲ್ಲಿ ನಮ್ಮಲ್ಲಿಯ ಹಾಸ್ಟೆಲ್ ಏನಿದೆ ಅಲ್ಲಿ ತರಬೇತಿಯನ್ನು ಕುಸ್ತಿಪಟುಗಳಿಗೆ ಕೊಡಲಾಗುತ್ತಿದೆ. ಮತ್ತು ಆಯ್ಕೆಯನ್ನು ಕೂಡ ಅಲ್ಲಿ ಮಾಡಲಾಗುತ್ತಿದೆ.

ಶ್ರೀ ಎ.ರಾಮದಾಸ್: ಗರಡಿಗಳ ಅಭಿವೃದ್ಧಿಗೋಸ್ಕರ ಯಾವ ಯೋಜನೆ ಹಾಕಿಕೊಂಡಿದ್ದೀರಿ ಮತ್ತು ಇದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್: ಅಧ್ಯಕ್ಷರೆ, ಜಿಲ್ಲಾ ಪಂಚಾಯತಿ ವತಿಯಿಂದ ಈ ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದು ಇದಕ್ಕಾಗಿ ರಾಜ್ಯದಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಇದರಲ್ಲಿ ಗರಡಿ ಮನೆ ಯೋಜನೆಯನ್ನು ಜಿಲ್ಲಾ ಪಂಚಾಯತಿ ವತಿಯಿಂದ ಮಾಡಿಸಲಾಗುತ್ತಿದೆ.

ಶ್ರೀ ಆಂಜನಮೂರ್ತಿ: ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶದಲ್ಲಿರುವ ಉತ್ತಮವಾದ ಕ್ರೀಡಾಪಟುಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ ಅಗತ್ಯವಾಗಿ ಬೇಕಾದ ಸ್ಟೇಡಿಯಂ ಇಲ್ಲದೇ ಕ್ರೀಡೆಗಳ ಬಗ್ಗೆ ಶಿಬಿರವನ್ನು ಏರ್ಪಡಿಸಲು ಆಗುತ್ತಿಲ್ಲ. ಈಗ ಯಾವ ಯಾವ ಕ್ರೀಡಾಂಗಣ ಪೂರ್ಣವಾಗಿಲ್ಲವೋ ಅವುಗಳನ್ನು ಯಾವಾಗ ಪೂರ್ಣಗೊಳಿಸುತ್ತಾರೆ ಮತ್ತು ಪ್ರತಿಯೊಂದು ತಾಲ್ಲೂಕಿಗೂ ಕ್ರೀಡಾ ಯೋಜನಾಧಿಕಾರಿಗಳನ್ನು ಯಾವಾಗ ನೇಮಕ ಮಾಡುತ್ತಾರೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರತಿಯೊಂದು ಜಿಲ್ಲೆಗೆ ಕ್ರೀಡಾ ಜಿಲ್ಲಾ ಅಧಿಕಾರಿಗಳನ್ನು ನಮ್ಮ ಇಲಾಖೆ ವತಿಯಿಂದ ನೇಮಕ ಮಾಡುತ್ತಿದ್ದೇವೆ. ಇದಲ್ಲದೇ ಶಿಕ್ಷಣ ಇಲಾಖೆಯಿಂದ ಫಿಸಿಕಲ್ ಇನ್ಸ್‌ಪೆಕ್ಟರ್‌ಗಳನ್ನು ಟ್ರಾನ್ಸ್‌ಫರ್ ತೆಗೆದುಕೊಂಡು ಜಿಲ್ಲೆಗೆ ನೇಮಕ ಮಾಡುತ್ತಿದ್ದೇವೆ. ಇನ್ನು ಮಾನ್ಯ ಸದಸ್ಯರು ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆ ಅಭಿವೃದ್ಧಿಗಾಗಿ ಕ್ರೀಡಾಂಗಣ ನಿರ್ಮಾಣದ ಬಗ್ಗೆ ಕೇಳಿದ್ದಾರೆ ಮತ್ತು ಪ್ರೋತ್ಸಾಹಕರ ವಿವಿಧ ಯೋಜನೆಗಳ್ಯಾವುವು ಎಂದು ಕೇಳಿದ್ದಾರೆ. ಈಗಾಗಲೇ ನಾನು ಉತ್ತರದಲ್ಲಿ ತಿಳಿಸಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿನ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಹಿಳಾ ಕ್ರೀಡಾ ಕೂಟ, ದಸರಾ ಕ್ರೀಡಾ ಕೂಟ ಸ್ಪರ್ದೆಗಳನ್ನು ತಾಲ್ಲೂಕು ಮಟ್ಟದಲ್ಲಿ ಮೊದಲು ನಡೆಸಿ ಅದರಲ್ಲಿ ಆಯ್ಕೆಯಾದವರನ್ನು ಜಿಲ್ಲಾ ಮಟ್ಟದಲ್ಲಿ ನಡೆಯುವ ಕ್ರೀಡಾಸ್ಪರ್ದೆಗೆ ಕಳುಹಿಸಿ ಅಲ್ಲಿಂದ ಆಯ್ಕೆಯಾದವರನ್ನು ರಾಜ್ಯ ಮಟ್ಟದಲ್ಲಿ ಸ್ಪರ್ದೆಗೆ ಆಯ್ಕೆ ಮಾಡಲಾಗುತ್ತದೆ. ಇನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕ್ರೀಡಾಂಗಣ ಮಾಡಬೇಕೆನ್ನುವ ಯೋಜನೆ ಇದೆ. ಆದರೆ ಜಾಗದ ಕೊರತೆ ಇದೆ. ಈ ಸಲುವಾಗಿಯೇ ನಾನು ಆಯಾಯ ಕ್ಷೇತ್ರದ ಶಾಸಕರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಕರೆಸ್ಪಾಂಡೆನ್ಸ್ ಮಾಡಿದ್ದೆ. ಯಾವ ಯಾವ ತಾಲ್ಲೂಕಿನಲ್ಲಿ ನಮಗೆ ಕ್ರೀಡಾಂಗಣಕ್ಕೆ ಜಾಗದ ಅವಶ್ಯಕತೆ ಇದೆಯೋ ಅದನ್ನು ಕೊಡಬೇಕೆಂದು ಕೇಳಿದ್ದೇನೆ. ಬೇಕಾದ ಸ್ಥಳದ ಜಾಗವನ್ನು ಕೊಟ್ಟರೆ ತಾಲ್ಲೂಕಿನಲ್ಲಿ ಕ್ರೀಡಾಂಗಣ ಕಟ್ಟಲು ಅನುಕೂಲವಾಗುತ್ತದೆ.

ಶ್ರೀ ಹೆಚ್.ಸಿ.ಬಸವರಾಜ್: ಮಾನ್ಯ ಅಧ್ಯಕ್ಷರೆ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಕ್ರೀಡಾಪಟುಗಳು ರಾಜ್ಯ ಮಟ್ಟದಿಂದ ಆಯ್ಕೆಯಾಗಿ ರಾಷ್ಟ್ರಮಟ್ಟಕ್ಕೆ ಕ್ರೀಡಾ ಸ್ಪರ್ಧೆಗೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಗಮನಕ್ಕೆ ಬಂದಿದ್ದರೆ ಅವರಿಗೆ ಏನೇನು ಉತ್ತೇಜನಕಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಗುಂಡಪ್ಪ ವಕೀಲ್: ಮಾನ್ಯ ಅಧ್ಯಕ್ಷರೆ, ಔರಾದ್ ತಾಲ್ಲೂಕಿನಲ್ಲಿ 7 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಈಗಾಗಲೇ ಹತ್ತು ವರ್ಷಗಳಾಗಿವೆ. ಕ್ರೀಡಾಂಗಣವಾಗಿಲ್ಲ. ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ತಾವು ಆ ಕ್ರೀಡಾಂಗಣವನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಿ ಕ್ರಮ ತೆಗೆದುಕೊಳ್ಳಿ ಎಂದು ನನ್ನ ವಿನಂತಿ. ಈಗಾಗಲೇ ಹತ್ತು ವರ್ಷವಾಯಿತು, ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಿ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ: ಮಾಡುತ್ತೇವೆ.

ಶ್ರೀ ಸಿ.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಬಹಳಷ್ಟು ಹಣವನ್ನು ಎಲ್ಲಾ ವಿಚಾರಕ್ಕೆ ಖರ್ಚು ಮಾಡಿದ್ದೇವೆ, ಸ್ಪರ್ಧೆ ಇಟ್ಟಿದ್ದೇವೆ ಎಂದು ಹೇಳುತ್ತಾರಲ್ಲ, ಮೈಸೂರು ಜಿಲ್ಲೆಯ ಅಂಬಾಳದಲ್ಲಿ ಇರತಕ್ಕಂಥ ನ್ಯಾಷನಲ್ ಸ್ಕೂಲ್ ಆಫ್ ಸ್ಪೋರ್ಟ್ಸ್‌ನಲ್ಲಿ ಎಷ್ಟು ಜನ ಗ್ರಾಮಾಂತರ ಮಕ್ಕಳು ದಾಖಲಾಗಿದ್ದಾರೆ ಹಾಗೂ ವಸತಿಯಲ್ಲಿ ಓದುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಒದಗಿಸಬೇಕೆಂದು ಕೇಳುತ್ತೇನೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಯುವಜನ ಸಚಿವರು, ಎಲ್ಲೆಲ್ಲಿ ಸ್ಥಳ ಕೊಡುತ್ತೀರಿ, ಅಲ್ಲಿ ಸ್ಟೇಡಿಯಂ ನಿರ್ಮಾಣ ಮಾಡಿ ಕೊಡುತ್ತೇವೆಂದು ಹೇಳಿದರು. ನಮ್ಮ ಬಾಗೇಪಲ್ಲಿಯಲ್ಲಿ ಏಳುವರ್ಷಗಳ ಹಿಂದೆ ಕ್ರೀಡಾಂಗಣ ಪ್ರಾರಂಭ ಮಾಡಿ ಇದುವರೆಗೂ ಪೂರ್ಣವಾಗಿಲ್ಲ. ನಾನು ಮೊನ್ನೆ ಸಚಿವರನ್ನು ಪ್ರಶ್ನೆ ಕೇಳಿದ್ದಕ್ಕೆ ನೀವು ಪಾರ್ಲಿಮೆಂಟ್ ಮೆಂಬರ್ ಕೈಯಲ್ಲಿ ಇದನ್ನು ಕಳುಹಿಸಿ, ಅವರ ಗ್ರಾಂಟ್‌ನಲ್ಲಿ ಇದಕ್ಕೆ ಹಣ ಉಪಯೋಗಿಸಿ ಕೊಳ್ಳಿ ಎಂದು ಉತ್ತರ ಕೊಡುತ್ತಾರೆ. ಆದರೆ ಪಾರ್ಲಿಮೆಂಟ್ ಮೆಂಬರ್ ಕಡೆಯಿಂದ ಎಷ್ಟು ಹಣ ಇದಕ್ಕೆ ಬಿಡುಗಡೆ ಮಾಡುತ್ತಾರೆ? ಕ್ರೀಡಾಂಗಣಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ ಪೂರ್ಣ ಮಾಡಬೇಕು. ಸುಮಾರು ತಾಲ್ಲೂಕುಗಳಲ್ಲಿ ಕ್ರೀಡಾಂಗಣ ಪೂರ್ಣವಾಗಿಲ್ಲ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಂಪಂಗಿಯವರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳುವುದಾದರೆ ಪ್ರತಿಯೊಂದು ತಾಲ್ಲೂಕುಗಳಲ್ಲಿ ತಾಲ್ಲೂಕು ಕ್ರೀಡಾಂಗಣಕ್ಕೆ 45 ರಿಂದ 50 ಲಕ್ಷ ರೂಪಾಯಿ ಬೇಕಾಗುತ್ತದೆ. ಅದರಲ್ಲಿ ರಾಜ್ಯ ಯೋಜನೆಯಿಂದ ಸ್ಟೇಟ್ ಪೋರ್ಷನ್ ಎಂದು 1/3, ಲೋಕಲ್ ಕಾಂಟ್ರಿಬ್ಯೂಷನ್ 1/3 ಹಾಗೂ ಸೆಂಟ್ರಲ್ ಗೌವರ್ನ್‌ಮೆಂಟ್‌ನಿಂದ 1/3 ಕೊಡುತ್ತಾರೆ. ಅದರಲ್ಲಿ ನಮ್ಮ ರಾಜ್ಯವಲಯ ಹಾಗೂ ಲೋಕಲ್ ಕಾಂಟ್ರಿಬ್ಯೂಷನ್ ಹಣವನ್ನು ತೆಗೆದುಕೊಂಡ ಮೇಲೆ ಅದನ್ನು ನಾವು ಸೆಂಟ್ರಲ್‌ಗೆ ಕಳುಹಿಸುತ್ತೇವೆ. ಅವರು ನಮ್ಮ ರಾಜ್ಯ ವಲಯದ ಹಣ ಕೊಟ್ಟಿರುವಾಗ ಸೆಂಟ್ರಲ್‌ನವರು ಕೊಟ್ಟಿ ಕೊಡುತ್ತಾರೆ. ಕೊಟ್ಟಮೇಲೆ ಆ ಕ್ರೀಡಾಂಗಣ ಸಂಪೂರ್ಣವಾಗುತ್ತದೆ. ಕ್ರೀಡಾಂಗಣವನ್ನು ಪೂರ್ತಿ ರಾಜ್ಯದ ಹಣದಿಂದಲೇ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ಮಾನ್ಯ ಗುರುಸ್ವಾಮಿಯವರು, ಏನು ಕೇಳಿದ್ದಾರೆ ಅದನ್ನು ಪರಿಶೀಲನೆ ಮಾಡಿ, ನಾವು ಅವರು ಕುಳಿತು ಮಾತನಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ನಾನು ನವಲಗುಂದ ತಾಲ್ಲೂಕಿನದನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು: ಈಗಾಗಲೇ ಸಮಯ ಮುಗಿದು ಹೋಗಿದೆ. ಈಗ ಗ್ರೇಸ್ ಟೈಂನಲ್ಲಿ ಇದ್ದೇವೆ, ದಯವಿಟ್ಟು ಕ್ಷಮಿಸಬೇಕು.

ಶ್ರೀ ಹೆಚ್.ಸಿ.ಬಸವರಾಜು: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು: ತಾವು ಮೈಸೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಕೇಳಬೇಕು. ಆದರೆ ನೀವು ಪಿರಿಯಾ ಪಟ್ಟಣದ್ದು ಕೇಳಿದರೆ ಅವರ ಹತ್ತಿರ ಉತ್ತರ ಎಲ್ಲಿ ಇರುತ್ತದೆ?

ಶ್ರೀ ಗದ್ದಿ ಕಲ್ಲಪ್ಪ ನಾಗಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ನವಲಗುಂದ ತಾಲ್ಲೂಕಿನಲ್ಲಿ ಈಗಾಗಲೇ ಒಂದು ಹೈಸ್ಕೂಲ್ ಜಾಗವನ್ನು ಕ್ರೀಡಾಂಗಣ ಕಟ್ಟಿಸುವುದಕ್ಕೆ ಕೊಟ್ಟಿದ್ದಾರೆ. ಆದುದರಿಂದ ಅಲ್ಲಿ ಯಾವಾಗ ಪ್ರಾರಂಭ ಮಾಡುತ್ತಾರೆ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ತಾವು ಇಂಡಿವಿಜುಯಲ್ ಆಗಿ ತಾಲ್ಲೂಕು ಬಗ್ಗೆ ಕೇಳಬೇಡಿ. ಜನರಲ್ ಕ್ವೆಶ್ಚನ್ ಕೇಳಿ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಅವರು ಇದಕ್ಕೆ ಇನ್ನೊಂದು ಬಾರಿ ಬೇರೆ ಪ್ರಶ್ನೆ ಕೇಳಲಿ.

ಜೆ.ಎಂ.ಎಫ್.ಸಿ ಮತ್ತು ಸಿವಿಲ್ ನ್ಯಾಯಾಲಯಗಳು ಸ್ವಂತ ಕಟ್ಟಡಗಳನ್ನು ಹೊಂದಿವೆಯೇ?

73(589)

ಶ್ರೀ ಹೆಚ್.ಎಂ.ರೇವಣ್ಣ(ಮಾಗಡಿ): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಎಲ್ಲಾ ಪ್ರಥಮ ದರ್ಜೆ ನ್ಯಾಯ ದಂಡಾಧಿಕಾರಿಗಳು ಹಾಗೂ ಸಿವಿಲ್ ನ್ಯಾಯಾಲಯಗಳಿಗೆ ಸ್ವಂತ ಕಟ್ಟಡಗಳು ಇವೆಯೇ?

ಆ) ಮಾಗಡಿಯ ಪ್ರಥಮ ದರ್ಜೆ ನ್ಯಾಯ ದಂಡಾಧಿಕಾರಿಗಳು ಹಾಗೂ ಸಿವಿಲ್ ನ್ಯಾಯಾಧೀಶರ ಕಾರ್ಯಾಲಯಕ್ಕೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸ್ವಂತ ಕಟ್ಟಡ ಕಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ